ಶ್ರೀ ಎಂ. ಮಹದೇವ್.—ಕರ್ನಾಟಕ ಯೂನಿವರ್ಸಿಟಿಯಲ್ಲಿ ಹಿಂದಿ ಡಿಪಾರ್ಟ್‌ಮೆಂಟಿನಲ್ಲಿ ಈ ರೀತಿಯಾದ ಸುಳ್ಳು ಸರ್ಟಿಫಿಕೇಟ್ ಕೊಟ್ಟು ಕಟ್ಟಿಮನಿ ಎಂಬುವರು ಹುದ್ದೆಯನ್ನು ಪಡೆದಿದ್ದಾರೆ. ಇದರ ಬಗ್ಗೆ ನಾನು ಹಿಂದೆಯೇ ನಿದರ್ಶನವನ್ನೂ ಸಹ ಕೊಟ್ಟಿದ್ದೇನೆ. ಈರೀತಿ ಹಿಂದೆ ಮಾಹಿತಿ ಕೊಟ್ಟಿದ್ದರೂ ಸಹ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈರೀತಿಯಾಗಿ ಸುಳ್ಳು ಸರ್ಟಿಫಿಕೇಟ್ಸ್ ಅನ್ನು ಯಾರೇ ಕೊಟ್ಟರಲಿ ಅದು ತಪ್ಪು. ಅವರು ಶಿಕ್ಷಾರ್ಹರಾಗುತ್ತಾರೆ. ಇದರ ಜೊತೆಗೆ ಮಾನ್ಯ ಸದಸ್ಯರ ಹತ್ತಿರ ಇರತ ಕ್ಕಂಥಾ ಮಾಹಿತಿಯನ್ನೂ ಸಹ ಕೊಟ್ಟರೆ ಆ ಒಂದು ಆಧಾರವನ್ನೂ ಸಹ ಉಪಯೋಗಿಸಿಕೊಂಡು ಯಾರು ತಪ್ಪು ಮಾಡಿದ್ದಾರೆ ಅದನ್ನು ವಿಚಾರ ಮಾಡಿ, ಅವರ ಮೇಲೆ ಸರ್ಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಇಷ್ಟು ಹೇಳಿದರೂ ಕೂಡ ಮಾನ್ಯ ಸದಸ್ಯರು ಇನ್ನಾವ ರೀತಿಯಾಗಿ ಹೇಳ ಬೇಕೆಂದು ಬಯಸುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಮಹದೇವ್.—ನಾನೂ ಸಹ ನಿದರ್ಶನ ಕೊಟ್ಟಿದ್ದೇನೆ. ನೀವೂ ಸಹ ಮಾಹಿತಿ ತರಿಸಿ ಕೊಳ್ಳುವುದಕ್ಕೆ ಅಧಿಕಾರ ಇದೆಯೆಲ್ಲಾ ಏತಕ್ಕೆ ಹಾಗೆ ಮಾಡಬಾರದು.

Mr. Speaker.—No debate on it. It shall not go to the records.

(xi) ಸ್ವೀಪರ್ಸ್ ಪದವೀಧರರಿಗೆ ಉದ್ಯೋಗ ಒದಗಿಸುವ ಬಗ್ಗೆ

ಶ್ರೀ ಎಂ. ಎಂ. ನಾನಯ್ಯ —ಸ್ಪಾಮಿ, ನಮ್ಮ ರಾಜ್ಯದಲ್ಲಿ 14 ಸಾವಿರ ಜನ ಸ್ವೀಪರ್ಸ್ ಪದವೀಧರರು ಏನು ಇದ್ದಾರೆ ಅವರ ಸೇವಾವಧಿ 31-3-1984ರವರೆಗೆ ಮುಂದುವರೆಸಿದ್ದಾರೆ. ಎರಡನೆಯದಾಗಿ ಇವರಿಗೆ 200 ರೂಪಾಯಿ ಕೊಡುತ್ತಿದ್ದುದನ್ನು 300 ರೂಪಾಯಿಗೆ ಏರಿಸಿ ಜೊತೆಗೆ ಟ್ರಾವಲಿಂಗ್ ಅಲೋಯನ್ಸ್ 50 ರೂಪಾಯಿ ಒಟ್ಟು 350 ರೂಪಾಯಿ ಕೊಡುವ ಹಾಗೆ ಇದೇ 17 ನೇ ಮಾರ್ಚಿಯಲ್ಲಿ ಒಂದು ಆರ್ಡರ್ ಇಷ್ಟೂ ಆಯಿತು. ಅನಂತರ 24-3-1984 ರಂದು ಅಂಡರ್ ಸೆಕ್ರೆಟರಿ ಟು ಗಾರ್ನಮೆಂಟ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಮತ್ತೊಂದು ಕ್ರಾಂತಿಕಾರಕವಾದ ಆರ್ಡರ್ ಹೋಗಿದೆ. ಅದನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಅದು ಈರೀತಿ ಇದೆ.—

Addendum No. SWL.102. ECS 83 dated 24th March, 1984. Subject : Stipendiary employment Scheme-enhancement of stipend from Rs. 200-00 to 300-00 per month and payment of fixed Travelling Allowance of Rs.50/-per month orders issued.

"After para 2 of the order portion of the Government order of even number dated 17th March, 1984, the following para may be included.—

"The stipend will be allowed only until the stipendiry receives a call for interview to a post. Even if he/she is not selected to the post his/her services will be terminated."

By order and in the name of the Governor of Karnataka, signed K. Kapinaiah, Under Secretary to Government, Social Welfare and Labour Department. ಎಂದು ಇದೆ. ಇದರಿಂದ ಏನಾಗುತ್ತದೆ ಎಂದರೆ ಅವನು 7-8 ವರ್ಷ ಕೆಲಸ ಮಾಡಿದ್ದರೂ ಸಹ ಅವನು ಸರ್ಕಾರದ ಪರವಾಗಿ ಕೆಲಸ ಮಾಡಿದ್ದರೂ ಸಹ ಇಂಟರ್‌ವ್ಯೂ ಬಂದ ಕೂಡಲೇ ಅವನು ಸೆಲೆಕ್ಟ್ ಆಗಲಿ ಆಗದೇ ಇರಲಿ, ಅವನನ್ನು ತೆಗೆದುಹಾಕಿದರೆ ಅವನು ಯಾವರೀತಿಯಾಗಿ ಜೀವನ ಮಾಡಬೇಕು. ಇದು ಸರಿಯೇ ? ಅವನು ಕಾಂಗ್ರೆಸ್‌ಗೆ ವಿರುದ್ಧವಾಗಿ ನಿಮ್ಮ ಪರವಾಗಿಯೇ ಕೆಲಸ ಮಾಡಿದ್ದಾನೆ.

ಅಧ್ಯಕ್ಷರು,—ತಾವು ದಯವಿಟ್ಟು ಇಲ್ಲಿ ಪಾಲಿಟಿಕ್ಸ್ ತರಬೇಡಿ.

ಶ್ರೀ ಎಂ. ಎಂ. ನಾನಯ್ಯ.— ಆಗಲಿ ನಾನು ಹೇಳುವುದು ಇಷ್ಟೆ. ಈಗ ನೀವು ಇಂಟರ್‌ವ್ಯೂ ಕಳುಹಿಸುವಾಗ ಒಬ್ಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡಿಕೊಳ್ಳಬೇಕಾದರೆ 10 ಜನಕ್ಕೆ ಇಂಟರವ್ಯೂ

ಹೋಗಿರುತ್ತದೆ. ಆದರಲ್ಲಿ ಒಬ್ಬ ಸೆಲೆಕ್ಟ್ ಆದರೆ ಇನ್ನು 9 ಜನರು ಸೆಲೆಕ್ಟ್ ಆಗುವುದಿಲ್ಲ. ಅವರ ನ್ನೆಲ್ಲಾ ಡಿಲೀಟ್ ಮಾಡಿಬಿಡುತ್ತಾರೆ. ಈಗ ನಮ್ಮ ಜಿಲ್ಲೆ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ 435 ಜನ ಇದ್ದಾರೆ, ಅವರಲ್ಲಿ 43 ಜನಕ್ಕೆ ಮಾತ್ರ ಉದ್ಯೋಗ ಸಿಕ್ಕುತ್ತದೆ. ಹೀಗೆ ಒಟ್ಟು 14 ಸಾವಿರ ಸ್ಕೈಫಂಡರಿ ಪದವೀಧರರ ಲೆಕ್ಕಾಚಾರ ತೆಗೆದುಕೊಂಡರೆ ಆದರಲ್ಲಿ 1400 ಜನರಿಗೆ ಉದ್ಯೋಗ ಸಿಕ್ಕುತ್ತದೆ. ಹೀಗಿರುವಾಗ ಅವರನ್ನು ಇಂಟರ್‌ವ್ಯೂಗೆ ಕರೆದ ತಕ್ಷಣ ಟರ್ಮಿನೇಟ್ ಮಾಡಿದರೆ, ಅವನನ್ನು ಆ ಕೆಲಸಕ್ಕೆ ಮತ್ತೆ ವಾಪಸ್ಸು ತೆಗೆದುಕೊಳ್ಳದೇ ಹೋದರೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಇವರಿಗೆ 350 ರೂಪಾಯಿ ಏನು ಕೊಡುತ್ತಿದ್ದೀರಿ ಅವನು ಸೆಲೆಕ್ಟ್ ಆಗದೇ ವಾಪಸ್ಸು ಬಂದಾಗ ಆ ಉದ್ಯೋಗವನ್ನಾದರೂ ಸಿಗುವ ಹಾಗೆ ಖಾತ್ರಿ ಮಾಡಿಕೊಡಿ ಇಲ್ಲದೇ ಹೋದರೆ ಮತ್ತೆ ಚಳುವಳಿ ಮಾಡಬೇಕಾಗುತ್ತದೆ. ಇದಕ್ಕೆ ನಿಮ್ಮ ಪಕ್ಷದ ಬೆಂಬಲವನ್ನೂ ಗಳಿಸಿಕೊಂಡು ಅವರ ಬಗ್ಗೆ ಆಸ್ಥೆ ವಹಿಸಿ ಆ ಸ್ಕೈಫಂಡರಿ ಪದವೀಧರರಿಗೆ ಯಾವರೀತಿಯಾಗಿಯೂ ತೊಂದರೆಯಾಗದಂತೆ ಅವರನ್ನು ಕಾಪಾಡಬೇಕು ಎಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ತಕ್ಷಣ ಉತ್ತರ ಹೇಳುವಂಥ ಪರಿಸ್ಥಿತಿಯಲ್ಲಿ ಇಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಆಜ್ಞೆ ಆಗಿದೆ. ಅದನ್ನು ಏನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳತಕ್ಕಂಥಪರಿಸ್ಥಿತಿಯಲ್ಲಿ ಇಲ್ಲ, ಅವರು ಹೇಳಿರತಕ್ಕ ಆಪಾದನೆಗಳ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ, 1-10ರ ಪ್ರಕಾರ ಇಂಟರ್‌ವ್ಯೂ ಕರೆದಿದ್ದಾರೆ. ಇಂಟರ್‌ವ್ಯೂ ಬಂದತಕ್ಷಣ ಸ್ಕೈಫಂಡರಿ ಪದವೀಧರರನ್ನು ಕೆಲಸದಿಂದ ತೆಗೆದುಹಾಕುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಂಟರ್‌ವ್ಯೂ ಬಂದವೇಲೆ ಟರ್ಮಿನೇಟ್ ಮಾಡುತ್ತಾರೆ.

(ಗೊಂದಲ)

ಶ್ರೀ ಪಂಪಾಪತಿ.—ಮುಂದುವರಿಸುತ್ತೇವೆಂದು ಹೇಳಿ.

ಶ್ರೀ ಕೆ. ಹೆಚ್. ರಂಗನಾಥ.—ಕಾನೂನು ಮಂತ್ರಿಗಳು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಬಹಳಮಟ್ಟಿಗೆ ಅವರಿಗೆ ಗೊತ್ತಿಲ್ಲದೇ ಇರಬಹುದು. ಯಾವ ಖಾತೆಯ ಮಂತ್ರಿಗಳು ಇದರ ಬಗ್ಗೆ ಕೆಲಸಮಾಡುತ್ತಾರೋ ಗೊತ್ತಿಲ್ಲ. ಇದಕ್ಕೆ ಉತ್ತರ ಕೊಡುವಂಥ ಮಂತ್ರಿಗಳು ಯಾರು ?

ಅಧ್ಯಕ್ಷರು.—ಮಾನ್ಯ ರಂಗನಾಥರವರೇ 334ರ ವ್ಯಾಪ್ತಿ ತಮಗೆ ಗೊತ್ತಿದೆ.

ಶ್ರೀ ಕೆ. ಹೆಚ್. ರಂಗನಾಥ.—ತಾವು ಸ್ಟೈಫೆಂಡರಿ ಗ್ರಾಜುಯೇಟ್ ಅಲ್ಲ ನಾನು ಸ್ಟೈಫೆಂಡರಿ ಗಾಜ್ಯುಯೇಟ್ ಅಲ್ಲ, ವಿದ್ಯಾವಂತ ಯುವಕರ ಪ್ರಶ್ನೆ ಇದು. ಅವರು ಇಂಟರ್‌ವ್ಯೂ ಪಡೆದ ತಕ್ಷಣ ಪಟ್ಟಿಯಿಂದ ಹೆಸರು ಹೊರಟು ಹೋಗುತ್ತದೆ. ನಾಳೆ ಅವರು ಸರ್ಕಾರವನ್ನು ಕೇಳುವುದಕ್ಕೆ ಅವಕಾಶ ಇಲ್ಲ, ಮಂತ್ರಿಮಂಡಳದಲ್ಲಿ ಇದರ ಬಗ್ಗೆ ಜವಾಬ್ದಾರಿಯಿಂದ ಉತ್ತರ ಹೇಳುವವರು ಯಾರು ?

ಶ್ರೀ ಪಂಪಾಪತಿ.—ಪರಿಶೀಲನೆ ಮಾಡುವವರೆಗೆ ಹಾಗೆ ಮುಂದುವರಿಸಲಿ ಇಲ್ಲದೇ ಹೋದರೆ ಆ ಯುವಕರ ಗತಿ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಹೊರಡಿಸಿರತಕ್ಕ ಆಜ್ಞೆಯಲ್ಲಿ ಟರ್ಮಿನೇಟ್ ಮಾಡಬೇಕೆಂದು ಇಲ್ಲ.

Mr. K. H. Ranganath.—The Hon. Minister may not be aware of the Government Order. Let him ready tomorrow after knowing the facts.

ಶ್ರೀ ಎಸ್. ಆರ್. ಬೊಮ್ಮಾಯಿ.....ಸ್ವಾಮಿ, ಈ ವಿಚಾರದಲ್ಲಿ ಪರಿಶೀಲನೆ ಮಾಡಿ ನಾಳೆ ಸರಿಯಾಗಿ ಉತ್ತರ ಕೊಡುತ್ತೇನೆ.